**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಅಫಜಲಪೂರ.</u>**

**<u>ಸಿ.ಸಿ.ನಂ.389/2020</u>**

ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ್ ಠಾಣೆ

**-:ವಿರುದ್ದ:-**

**ಆರೋಪಿ/ತರುಃ** ಗಣಪತಿ ತಂದೆ ಬಸಣ್ಣ ಕಂಠಗೋಳ,
62 ವರ್ಷ, ಉಃಕೂಲಿ ಕೆಲಸ,
ವಾಸಃ ಮಲ್ಲಬಾದ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿತನ ಹೇಳಿಕೆಗಳು</u>**

ಪ್ರಃ1: ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ

ಪ್ರಃ 2 ಪ್ರಾಸಾ-01 ವಿಶ್ವನಾಥ ತಂದೆ ಮಹಾದೇವಪ್ಪ ಮುದರೆಡ್ಡಿ ಪಿ.ಎಸ್.ಐ ಅಫಜಲಪೂರ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 03.11.2020 ರಂದು ಸಾಯಂಕಾಲ 04-30 ಗಂಟೆಗೆ ತಾನು, ಠಾಣಾ ಕರ್ತವ್ಯದಲ್ಲಿದ್ದಾಗ ಮಲ್ಲಾಬಾದ ಗ್ರಾಮದ ಮಹಾಲಕ್ಷ್ಮೀ ಗುಡಿಯ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಸದರಿ ಆರೋಪಿತನು ಹೋಗಿ-ಬರುವ ಜನರಿಗೆ ಒಂದು ರೂಪಾಯಿಗೆ 80/- ರೂಪಾಯಿ ಎಂದು ಕೂಗುತ್ತಾ ಮಟಕಾ ಚೀಟಿ ಬರೆಯುವ ಬಗ್ಗೆ ಮಾಹಿತಿ ಬಂದಿತ್ತು, ಅದನ್ನು ಠಾಣಾ ಗುನ್ನೆಯಲ್ಲಿ ಬರೆಯಿಸಿ, ನಂತರ ಚಾಸಾ-2 ಮತ್ತು 3 ರವರನ್ನು ಕರೆಯಿಸಿ ಚಾಸಾ-5 ರವರಿಗೆ ಇಬ್ಬರೂ ಪಂಚರನ್ನು ಕರೆಯಿಸುವಂತೆ ಸೂಚಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 3 ಪ್ರಾಸಾ-01 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಅವರು ಚಾಸಾ-2 ಮತ್ತು 3 ರವರಿಗೆ ವಿಷಯ ತಿಳಿಸಿ ಸುಮಾರು 04-45 ಕ್ಕೆ ಠಾಣೆಯಿಂದ ಹೊರಟು 05-00 ಪಿ.ಎಂ ಕ್ಕೆ ಮಲ್ಲಾಬಾದ ಗ್ರಾಮಕ್ಕೆ ಹೋಗಿ ಬಸ್ಸ ನಿಲ್ದಾಣದ ಹತ್ತಿರ ವಾಹನ ನಿಲ್ಲಿಸಿ, ಗುಡಿಯ ಹತ್ತಿರ ನಡೆದುಕೊಂಡು ಹೋಗಿ ನೋಡಿದಾಗ, ಸದರಿ ಆರೋಪಿತನು ಹೋಗಿ-ಬರುವ ಜನರಿಗೆ ಒಂದು ರೂಪಾಯಿಗೆ 80/- ರೂಪಾಯಿ ಎಂದು ಕೂಗುತ್ತಾ ಮಟಕಾ ಚೀಟಿ ಬರೆಯುವುದನ್ನು ಖಚಿತಪಡಿಸಿಕೊಂಡು ತಾವು ಅವನನ್ನು ದಾಳಿ ಮಾಡಿ ಹಿಡಿದು ಅವನ ಹೆಸರನ್ನು ಕೇಳಲಾಗಿ ಗಣಪತಿ ಎಂದು ತಿಳಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ: 4 ಪ್ರಾಸಾ-01 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸದರಿ ಆರೋಪಿತನಿಂದ ಒಂದು ಮಟಕಾ ಚೀಟಿ, ಒಂದು ಪೆನ್ನು ಹಾಗೂ ರೂ.1,250/-ಗಳನ್ನು ಸಾಯಂಕಾಲ 05-15 ರಿಂದ 06-15 ರ ವರೆಗೆ ಪಂಚರ ಸಮಕ್ಷಮ ಜಪ್ತಿಪಡಿಸಿಕೊಂಡು, ಅವುಗಳಿಗೆ ಚೀಟಿ ಬರೆದು ಪಂಚರ ಸಹಿಯನ್ನು ಪಡೆದುಕೊಂಡು, ನಂತರ 06-30 ಕ್ಕೆ ಠಾಣೆಗೆ ಬಂದು ಸರಕಾರಿ ಪರ ಫಿರ್ಯಾದಿ ದಾಖಲಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ: 5 ಪ್ರಾಸಾ-02 ಶಿವಪ್ಪ ತಂದೆ ಗಿರಿಮಲ್ಲಪ್ಪ, ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯನ್ನು ನೋಡಿರುತ್ತೇನೆಂದು, ಈಗ್ಗೆ ಒಂದು ವರ್ಷದ ಹಿಂದೆ ಮಲ್ಲಾಬಾದ ಗ್ರಾಮದಲ್ಲಿ ಮಟಕಾ-ಜೂಜಾಟದ ಕುರಿತು ಪೋಲಿಸರು ಕರೆದುಕೊಂಡು ಹೋಗಿದ್ದರು. ಅಲ್ಲಿ ಸದರಿ ಆರೋಪಿತನಿಂದ ಒಂದು ಮಟಕಾ ಚೀಟಿ, ಒಂದು ಪೆನ್ನು ಹಾಗೂ ರೂ.1,250/-ಗಳನ್ನು ತನ್ನ ಹಾಗೂ ಚಾಸಾ-2 ರವರ ಸಮಕ್ಷಮ ಜಪ್ತಿಪಡಿಸಿಕೊಂಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ: 6 ಪ್ರಾಸಾ-03 ರುದ್ರಪ್ಪ ತಂದೆ ರಾಮಪ್ಪ ನಿವೃತ್ತ ನೌಕರ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 03.11.2020 ರಂದು ತಾನು ಕರ್ತವ್ಯದಲ್ಲಿದ್ದಾಗ, ಚಾಸಾ-1 ರವರು ಸಾಯಂಕಾಲ 06-30 ಕ್ಕೆ ಚಾಸಾ-4 ಮತ್ತು 5 ರವರು ಹೇಳಿಕೆ ನೀಡಿರುತ್ತಾರೆಂದು ಹಾಗೂ ಒಬ್ಬ ಆರೋಪಿ, ಮುದ್ದೇಮಾಲು ಮತ್ತು ಪಂಚನಾಮೆಯನ್ನು ಹಾಜರುಪಡಿಸಿರುತ್ತಾರೆಂದು ಹಾಗೂ ಅವುಗಳ ಆಧಾರದ ಮೇಲೆ ತಾನು ಪ್ರಕರಣವನ್ನು ದಾಖಲಿಸಿಕೊಂಡು, ಮಾನ್ಯ ನ್ಯಾಯಾಲಯಕ್ಕೆ ಪ್ರ.ವ.ವರದಿಯನ್ನು ಸಲ್ಲಿಸಿರುತ್ತೇನೆಂದು ಹಾಗೂ ಆರೋಪಿತನ ವಿರುದ್ದ ದೋಷಾರೋಪಣೆ ಪಟ್ಟಿಯನ್ನು ಚಾಸಾ-1 ರವರು ಸಲ್ಲಿಸಿರುತ್ತಾರೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ: 7 ಪ್ರಾಸಾ-05 ರಾವುತಪ್ಪ ತಂದೆ ಬಸಪ್ಪ ಪಿ.ಸಿ.-571, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 03.11.2020 ರಂದು ತಾನು ಮತ್ತು ಚಾಸಾ-4 ರವರು ಠಾಣಾ ಕರ್ತವ್ಯದಲ್ಲಿದ್ದಾಗ, ಚಾಸಾ-1 ರವರು ತಮಗೆ ತಿಳಿಸಿದ್ದೇನೆಂದರೆ ಮಲ್ಲಾಬಾದ ಗ್ರಾಮದ ಲಕ್ಷ್ಮೀ ದೇವಸ್ಥಾನದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಹೋಗಿಬರುವ ಜನರಿಗೆ ಮಟಕಾ ನಂಬರ ಬರೆದುಕೊಡುತ್ತಿದ್ದಾನೆಂದು ಹಾಗೂ 1 ರೂ.ಗೆ 80 ರೂಪಾಯಿ ಎಂದು ಜನರನ್ನು ಮನವೊಲಿಸಿ ಅವರಿಂದ ಹಣ ಪಡೆದು, ಅವರಿಗೆ ಅಂಕಿ ಸಂಖ್ಯೆ ಚೀಟಿ ಬರೆದುಕೊಡುತ್ತಿದ್ದಾನೆ ಎಂದು ಮಾಹಿತಿ ಬಂದ ಮೇರೆಗೆ ದಾಳಿ ಮಾಡುವುದಿದ್ದು ಅದಕ್ಕಾಗಿ ಚಂದಪ್ಪ ಮತ್ತು ಶಿವಪ್ಪ ಎನ್ನುವವರನ್ನು ಠಾಣೆಗೆ ಕರೆದುಕೊಂಡು ಬಂದು ಅವರಿಗೆ ಭಾತ್ಮಿ ವಿಷಯ ತಿಳಿಸಿ ಪಂಚರಾಗಲು ಕೋರಿದ್ದು, ಸದರಿಯವರು ಒಪ್ಪಿ ಕೊಂಡ ಮೇರೆಗೆ ಸಾಯಂಕಾಲ 4-45ಕ್ಕೆ ತಾನು, ಚಾಸಾ-1, ಚಾಸಾ-4 ಮತ್ತು ಪಂಚರು ಸೇರಿ ಮಲ್ಲಾಬಾದ ಗ್ರಾಮಕ್ಕೆ ಹೋಗಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 8 ಪ್ರಾಸಾ-05 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸಾಯಂಕಾಲ 05-00 ಗಂಟೆಗೆ ಮಲ್ಲಾಬಾದ ಗ್ರಾಮ ತಲುಪಿ ಬಸ್ ನಿಲ್ದಾಣ ಹತ್ತಿರ ತಮ್ಮ ವಾಹನ ನಿಲ್ಲಿಸಿ ದೇವಸ್ಥಾನ ಹತ್ತಿರ ನಡೆದುಕೊಂಡು ಹೋಗಿ ದೇವಸ್ಥಾನದ ಹತ್ತಿರ ಮರೆಯಲ್ಲಿ ನಿಂತು ನೋಡಿ ಅಲ್ಲಿ ಸಾರ್ವಜನಿಕ ಸ್ಥಳದಲ್ಲಿ ಸದರಿ ಆರೋಪಿತನು ಸಾರ್ವಜನಿಕರಿಂದ ಹಣ ಪಡೆದು ನಂಬರ ಬರೆದುಕೊಡುತ್ತಿರುವುದು ಕಂಡುಬಂದಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 9 ಪ್ರಾಸಾ-05 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ 5-15ಕ್ಕೆ ಆತನ ಮೇಲೆ ದಾಳಿ ಮಾಡಿ ವಿಚಾರಿಸಿದಾಗ ಆತನ ಹೆಸರು ಗಣಪತಿ ತಂದೆ ಬಸಣ್ಣ ಸಾಃ ಮಲ್ಲಾಬಾದ ಅಂತ ತಿಳಿಸಿರುತ್ತಾನೆಂದು ಹಾಗೂ ಸದರಿ ಆರೋಪಿತನ ಅಂಗ ಶೋದನೆ ಮಾಡಿ ನೋಡಿದಾಗ ಆತನ ಬಳಿ ರೂ.1250/- ನಗದು ಹಣ, ಒಂದು ಬಾಲ ಪೆನ್ನು ಮತ್ತು ಒಂದು ಚೀಟಿ ದೊರೆತ್ತಿದ್ದು, ಅವುಗಳನ್ನು ಪಂಚರ ಸಮಕ್ಷಮ 05-15 ರಿಂದ 6-15 ರವರೆಗೆ ಜಪ್ತಿ ಪಂಚನಾಮೆ ಮಾಡಿ ಜಪ್ತಿ ಪಡಿಸಿಕೊಂಡಿರುತ್ತಾರೆಂದು ಹಾಗೂ ತಾನು ಈ ಕುರಿತು ಚಾಸಾ-6 ರವರ ಮುಂದೆ ಹೇಳಿಕೆ ನೀಡಿರುತ್ತೇನೆಂದು ಹಾಗೂ ಜಪ್ತಿಪಡಿಸಿಕೊಂಡ ಮುದ್ದೇಮಾಲು ನೋಡಿದರೆ ಗುರುತಿಸುತ್ತೇನೆಂದು ಹಾಗೂ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ನೋಡಿ ಗುರುತಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ-10 ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ

ಪ್ರ-11 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಛಿಸುವಿರಾ?

ಉಃ

(ಆರೋಪಿತನ/ರ ಹೇಳಿಕೆಯನ್ನು ಆರೋಪಿತರಿಗೆ/ನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ/ನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿನಾಂಕಃ 20.01.2026

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಅಫಜಲಪೂರ.